ದಿಃ12.10.2018 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ ಜೆ.ಕೆ. ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ಸರಿಯಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ಕಂದಾಯ ಇಲಾಖೆಯ ಪಟ್ಟ ಪುಸ್ತಕವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ. 1 ಎಂದು, ಕಂದಾಯ ರಸೀದಿಯನ್ನು ನಿ.ಪಿ. 2 ಎಂದು, ತಹಶೀಲ್ದಾರರಿಗೆ ಸಲ್ಲಿಸಿದ ಅರ್ಜಿಯ ನಕಲನ್ನು ಹಾಜರುಪಡಿಸಿದ್ದು ಎದುರುದಾರರ ಪರ ವಕೀಲರ ತಕರಾರಿಗೊಳಪಟ್ಟು ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಡಿ.ಎಚ್.ಆರ್ ಪರವಾಗಿ ಶ್ರೀಎಚ್.ಬಿ.ಆರ್.ಕೆ. ವಕೀಲರಿಂದಃ-

ನಾನು ಸಲ್ಲಿಸಿರುವ ಅರ್ಜಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಗಂಡನ ತಂದೆಯ ಹೆಸರು ಈರಪ್ಪ. ನನ್ನ ಮಾವ ಈರಪ್ಪನಿಗೆ ನನ್ನ ಗಂಡ ಅಲ್ಲದೇ ಇನ್ನೊಬ್ಬ ಮಗ ಇದ್ದಾನೆ. ಆತನ ಹೆಸರು ಮೈಲಪ್ಪ. ಸೋಗಿ ಗ್ರಾಮದಲ್ಲಿ ನನ್ನ ಗಂಡನಿಗೆ 3 ಎಕರೆ ಜಮೀನು ಇದೆ. ನಮ್ಮ ಭೂಮಿಗೆ ತೆರಿಗೆ ಕಟ್ಟುವ ವಿಚಾರ ನನ್ನ ಮಕ್ಕಳು ನೋಡಿಕೊಳ್ಳುತ್ತಾರೆ. ನನ್ನ ತವರು ಮನೆ ಹರಪನಹಳ್ಳಿಯ ಕಂಬತ್ತನಳ್ಳಿ. ಚೆನ್ನಬಸಪ್ಪ ಮತ್ತು ಹಾಲಪ್ಪ ಅಡವಿಮಲ್ಲಿನಕೇರಿಯಲ್ಲಿ ದೊಡ್ಡ ಸಾಹುಕಾರರು ಎಂದರೆ ಸರಿ. ಅವರ ಕುಟುಂಬಕ್ಕೆ ಸುಮಾರು 100 ರಿಂದ 150 ಎಕರೆ ಭೂಮಿ ಇತ್ತು ಎಂದರೆ ಅವರ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. ಅಡವಿಮಲ್ಲಿನಕೇರಿಯ ನಂತರ ಮೂಗಬಸಪ್ಪನಮರಡಿ ದಾಟಿದ ನಂತರ ನಂದಿಬೇವುರು ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ಅಡವಿಮಲ್ಲಿನಕೇರಿಯ ಸುತ್ತ ಮುತ್ತ 3-4 ಕಿ.ಮೀ ದೂರದಲ್ಲಿ ವರಕನಹಳ್ಳಿ, ಕಣಿವೆಹಳ್ಳಿ, ತಳಕಲ್ ಗ್ರಾಮಗಳು ಇವೆ ಎಂದರೆ ಅವು ದೂರದಲ್ಲಿ ಇವೆ ಎನ್ನುತ್ತಾರೆ. ಅಡವಿಮಲ್ಲಿನಕೇರಿಯಿಂದ ಸೋಗಿ ಗ್ರಾಮ 4-5 ಕಿ.ಮೀ ದೂರದಲ್ಲಿದೆ. ಚೆನ್ನಬಸಪ್ಪ ಹಾಲಪ್ಪ ರವರ ಕುಟುಂಬದಲ್ಲಿ ಬಹಳಷ್ಟು ವರ್ಷಗಳಿಂದ ಸಿವಿಲ್ ಕೋರ್ಟಿನಲ್ಲಿ ಸ್ವತ್ತಿಗೆ ಸಂಬಂಧಪಟ್ಟಂತೆ ವ್ಯಾಜ್ಯ ಇದೆ ಎಂಬುದು ಸುತ್ತಮುತ್ತಲ ಊರಿನ ಎಲ್ಲರಿಗೂ ಗೊತ್ತು ಎಂದರೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಲಪ್ಪನವರನ್ನು ನಾನು ನೋಡಿಲ್ಲ ಎನ್ನುತ್ತಾರೆ. ಹಾಲಪ್ಪನವರ ಹೆಂಡತಿ ಮಕ್ಕಳ ವಿಳಾಸವನ್ನು ನಾನು ನನ್ನ ಮಕ್ಕಳು ಕಂಡುಕೊಂಡಿದ್ದೇವೆ. ನನಗೆ ಮಂಜುನಾಥ ಮತ್ತು ನಾಗರಾಜ ಎಂಬ 2 ಜನ ಮಕ್ಕಳು ಇದ್ದಾರೆ. ನಾಗರಾಜ ಸೋಗಿ ಗ್ರಾಮದ ಎಂ.ಬಿ. ಬಸವರಾಜ ಎಂಬುವವರ ಹತ್ತಿರ ಅಮಾಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಮಂಜುನಾಥ ಹಡಗಲಿಯ ಒಂದು ಲಾಡ್ಜ್‌ನಲ್ಲಿ ಕೆಲಸ ಮಾಡುತ್ತಾನೆ ಎಂದರೆ ಸರಿಯಲ್ಲ. ನಾನು 14-15 ವರ್ಷ ವಯಸ್ಸಿನವಳಾಗಿದ್ದಾಗಲೇ ನನ್ನ ಮದುವೆಯಾಗಿತ್ತು. 2011 ರಲ್ಲಿ ಹಾಲಪ್ಪನ ಮಕ್ಕಳು ಮತ್ತು ಚೆನ್ನಬಸಪ್ಪನ ಮಕ್ಕಳ ನಡುವೆ ಜಮೀನಿನ ವಿಚಾರವಾಗಿ ಗಲಾಟೆಯಾಗಿ

ಹೊಡೆದಾಟ ಆಗಿರುತ್ತದೆ ಎಂದರೆ ಅವರು ಹೊಡೆದಾಡಿಕೊಂಡಿರುತ್ತಾರೆ ಅಂದರೆ ಹೊಡೆದಾಡಿಕೊಂಡಿರಬಹುದು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತುಗ್ಗಳಲ್ಲಿ ನಾವು ಸ್ವಧಿನಲ್ಲಿ ಇದ್ದೇವೆ ಅಂತ ನನ್ನ ಗಂಡನಾಗಲಿ ಮಾವನವರಾಗಲಿ ಭೂನ್ಯಾಯಮಂಡಳಿ ಮುಂದೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ನಾವು ಅರ್ಜಿ ಸಲ್ಲಿಸಿದ್ದೇವೆ ಆದರೆ ಎದುರುದಾರರ 2 ಪಕ್ಷದವರು ಬಹಳಷ್ಟು ಹಣ ಇರುವವರು ನಮ್ಮ ಬಳಿ ಕೇವಲ ಪಟ್ಟ ಪುಸ್ತಕ ಮಾತ್ರ ಇದೆ ಎನ್ನುತ್ತಾರೆ. ಹಾಲಪ್ಪನ ಮತ್ತು ಚೆನ್ನಬಸಪ್ಪನ ನಡುವೆ ಭೂನ್ಯಾಯಮಂಡಳಿಯಲ್ಲಿ ವಿವಾದ ನೆಡೆದಿದೆ ಎಂದರೆ ಅವರ ನಡುವಿನ ವಿವಾದ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅವರ ವಿವಾದ ಮಾನ್ಯ ಉಚ್ಚ ನ್ಯಾಯೂಲಯಕ ವೆರೆಗೆ ಹೋಗಿ ಪುನಃ ಭೂನ್ಯಾಯಮಂಡಳಿಗೆ ವಾಪಸ್ಸು ಬಂದು ದಾವಾ ಸ್ವತ್ತು ಅಲ್ಲದೆ ಇತರೆ ಸ್ವತ್ತಿನಲ್ಲಿ ಸ್ವಾಧಿನದಲ್ಲಿ ಇದ್ದವರಿಗೆಲ್ಲರಿಗೂ ಸಹ ಪಟ್ಟ ಕೊಡಲಾಗಿದೆ ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ನಾವು ಸಲ್ಲಿಸಿರುವ ಅರ್ಜಿಯನ್ನು ಹೊರತುಪಡಿಸಿ ನಾವು ಬೇರೆ ಯಾವುದೇ ದಾವೆ ಹಾಕಿಲ್ಲ. ಈ ಕೇಸಿನ ವಿಚಾರ ಈಗ ನಮಗೆ ಗೊತ್ತಾದ್ದರಿಂದ ವಕೀಲರನ್ನು ಹಿಡಿದು ಅರ್ಜಿ ಸಲ್ಲಿಸಿದ್ದೇವೆ ಎನ್ನುತ್ತಾರೆ. ಈ ವರ್ಷ ನಾವು ಮೆಕ್ಕೆ ಜೋಳ ಬೆಳೆದಿದ್ದಾಗ ಹಾಲಜ್ಜನ ಮಕ್ಕಳು ಮತ್ತು ಚೆನ್ನಬಸಜ್ಜನ ಮಕ್ಕಳು ಇಬ್ಬರು ಹೊಲದ ಹತ್ತಿರ ಬಂದು ಇದು ನಮ್ಮ ಹೊಲ ಇದು ನಮ್ಮ ಹೊಲ ಅಂತ ಗಲಾಟೆ ಮಾಡಿ ನಿಮ್ಮ ಬಳಿ ಏನು ದಾಖಲೆ ಇದೆ ಅಂತ ನಮ್ಮನ್ನು ಕೇಳಿದರು ಆಗ ಈ ವ್ಯಾಜ್ಯದ ಬಗ್ಗೆ ಗೊತ್ತಾಗಿರುತ್ತದೆ. ಅವರು ನಮ್ಮ ಬಳಿ ಬಂದು ಗಲಾಟೆ ಮಾಡಿರುವ ವಿಚಾರವಾಗಿ ನಾನು ಪೋಲೀಸರಿಗೆ ದೂರು ಕೊಡಲಿಲ್ಲ ವಕೀಲರ ಬಳಿ ಹೋಗಿದ್ದೇವೆ. ನಿಮ್ಮನ್ನು ವಕೀಲರ ಹತ್ತಿರ 3ನೇ ತೀರ್ಪುಋಣಿ ಹರ್ಷಪ್ಪ ಕರೆದುಕೊಂಡು ಹೋಗಿದ್ದಾರ ಎಂದರೆ ನಮ್ಮನ್ನು ಯಾರು ಕರೆದುಕೊಂಡು ಹೋಗಿಲ್ಲ ನಾವು ಹೆಚ್ಚೆಟ್ಟದರು ನಾವೇ ಹೋಗಿರುತ್ತೇವೆ ಎನ್ನುತ್ತಾರೆ. ನಾವು ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಾದರೆ ಕಂದಾಯ ಇಲಾಖೆಯವರು ನಿಮಗಾಗಲಿ ನಿಮ್ಮ ಗಂಡನಿಗಾಗಲಿ ಮಾವನಿಗಾಗಲಿ ನೋಟೀಸು ಕೊಟ್ಟಿದ್ದಾರೆ ಎಂದರೆ ನನ್ನ ಗಂಡ ಕಂದಾಯ ಕಟ್ಟಿದ್ದಾರೆ ನಮಗೆ ಯಾವುದೇ ನೋಟೀಸು ಕೊಟ್ಟಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ತೀರ್ಪುಋಣಿ ಮತ್ತು ತೀರ್ಪುದಣಿಯವರ ಸ್ವತ್ತು ಇದೆ ಎಂದರೆ ನಾನು ಸ್ವಾಧಿನದಲ್ಲಿ ಇರುವ ಅಕ್ಕಪಕ್ಕದಲ್ಲಿ ಬೇರೆ ಜನರ ಸ್ವತ್ತುಗಳು ಇವೆ ಎನ್ನುತ್ತಾರೆ. 3ನೇ ಅನುಸೂಚಿತ ಸ್ವತ್ತಿನ ಪೂರ್ವಕ್ಕೆ ಹರಪನಹಳ್ಳಿ ಹಾಲಪ್ಪನವರ ಸ್ವತ್ತು ಇದೆ. ಪಶ್ಚಿಮಕ್ಕೆ ನಂಜಪ್ಪನವರ ಸ್ವತ್ತು ಇದೆ. ಉತ್ತರಕ್ಕೆ ಕೊಟ್ರಬಸಪ್ಪನ ಸ್ವತ್ತು ಇದೆ. ದಕ್ಷಿಣಕ್ಕೆ ಗಿರಿಸಿಂಗಪ್ಪನ ಸ್ವತ್ತು ಇದೆ. ಈ ಚೆಕ್ಕುಬಂದಿಯಲ್ಲಿಯೇ 3 ಸ್ವತ್ತುಗ್ಗಳು ಇವೆ. ನಾನು ಸ್ವಾಧೀನದಲ್ಲಿರುವ ಸ್ವತ್ತಿನಲ್ಲಿ ಯಾವುದೇ ಬಂಡಿದಾರಿ ಇಲ್ಲ. ಪೂಜಾರಿ ಕೊಟ್ರಪ್ಪನ ಹೊಲದ ಮೇಲೆ ಕಾಲುದಾರಿಯಲ್ಲಿ ಹೋಗಬೇಕು. ದಾವಾ ಸ್ವತ್ತಿನ ನಂತರ ಮೂಗಬಸಪ್ಪನ ಮರಡಿ(ಗುಡ್ಡ) ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಹೊಂದಿಕೊಂಡಂತೆ 14.80 ಎಕರೆ ಇರುವ ಒಂದು ದೊಡ್ಡ ಹೊಲ ಹೊಂದಿಕೊಂಡಂತೆ ಪೂರ್ವಕ್ಕೆ ಇದೆ ಎಂದರೆ ಸರಿಯಲ್ಲ. ಸದರಿ ಭೂಮಿ ಚೆನ್ನಬಸಪ್ಪನವರ ವ್ಯಾಜ್ಯದ ಭೂಮಿಗಳ ವ್ಯಾಜ್ಯದಲ್ಲಿ ಒಂದು ಎಎಂದರೆ ಇರಬಹುದು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅದು ಮೂಲತಃ ತುಮಕೂರಿನಲ್ಲಿರುವ

ಕೆ. ಸಿದ್ದಪ್ಪನವರ ಉಪನ್ಯಾಸಕರ ಭೂಮಿ ಎಂದರೆ ಅದು ಯಾರ ಭೂಮಿಯೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸಿದ್ದಪ್ಪ ಚೆನ್ನಬಸಪ್ಪನವರ ಮಗ ಎಂದರೆ ಅವರ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹಾಜರುಪಡಿಸಿರುವ ನಿ.ಪಿ. 2 ರಲ್ಲಿ ಕೆ. ಚೆನ್ನಬಸಪ್ಪನವರ ಹೆಸರು ಇದ್ದು ಆತ ತೀರ್ಪುಋಣಿಗಳ ತಂದೆ ಎಂದರೆ ಅದು ಸರಿ.

ಸೋಗಿ ಗ್ರಾಮದಲ್ಲಿರುವ ನನ್ನ ಗಂಡನ ಭೂಮಿಗೆ ಪಟ್ಟ ಕೊಟ್ಟಿದ್ದರೋ ಇಲ್ಲವೋ ನನ್ನ ಮಕ್ಕಳಿಗೆ ಗೊತ್ತು. ದಾವಾ ಸ್ವತ್ತಿನ ಪಹಣಿಯನ್ನು ತೆಗೆಸಿದ್ದೀರ ಎಂದರೆ ನಾವು ಪಹಣಿಯನ್ನು ಕೇಳಿದ್ದೇವೆ ಆದರೆ ಇಲಾಖೆಯವರು ಪಹಣಿಯನ್ನು ಕೊಡುತ್ತಿಲ್ಲ ಎನ್ನುತ್ತಾರೆ. ನಿ.ಪಿ. 1 ರ ಪಟ್ಟ ರಸೀದಿಯನ್ನು ಯಾರು ಯಾರಿಗೆ ಕೊಟ್ಟಿದ್ದಾರೆ ಎಂದರೆ ಅದು ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ನಿ.ಪಿ. 3 ರಲ್ಲಿರುವುದು ನನ್ನ ಗಂಡನ ಹೆಬ್ಬೆಟ್ಟಿನ ಸಹಿ. ನನ್ನ 2ನೇ ಮಗ ಹರ್ಷವರ್ಧನ ಮತ್ತು ರವೀದ್ರರವರ ಲಾಡ್ಜ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ದುಡಿದುಕೊಂಡು ತಿನ್ನುತ್ತಿದ್ದೇವೆ ಎನ್ನುತ್ತಾರೆ. ನಾವು ಚೆನ್ನಬಸಪ್ಪನ ಮನೆಯ ವಕ್ಕಲು ಕೆಲಸ ಮಾಡುವವರು ಎಂದರೆ ಸರಿಯಲ್ಲ, ನಾವು ಸೋಗಿಯವರು, ಅವರು ಅಡವಿಮಲ್ಲಿನಕೇರಿಯವರು ಎನ್ನುತ್ತಾರೆ. 30 ವರ್ಷಗಳಿಂದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದೇನೆ ಎಂದು ಕಟ್ಟುಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದವರ ಹೆಸರು ಪಹಣಿಯಲ್ಲಿ ಸೇರಿಸುತ್ತಾರೆ ಎಂದರೆ ನಾವು ಅರ್ಜಿ ಕೊಟ್ಟರು ಹೆಸರು ಸೇರಿಸುತ್ತಿಲ್ಲ ಏನು ಮಾಡುವುದು ಎನ್ನುತ್ತಾರೆ. ನಾನು ಕಂದಾಯ ಅಧಿಕಾರಿಗಳ ವಿರುದ್ದ ಯಾವುದೇ ಅಪೀಲು ದೂರು ಮಾಡಿಲ್ಲ. ತೀರ್ಪುಋಣಿ ಮತ್ತು ತೀರ್ಪುದಣಿಗಳ ನಡುವಿನ ಪ್ರಕರಣದ ವಿವರಗಳನ್ನು ನಾವು ನಮ್ಮ ವಕೀಲರ ಮೂಲಕ ತೆಗೆಯಿಸಿ ತಿಳಿದುಕೊಂಡಿದ್ದೇವೆ. ಈಗ್ಗೆ 4-5 ತಿಂಗಳ ಅವರು ಇಬ್ಬರು ಪಕ್ಷದವರು ಜಮೀನು ಹತ್ತಿರ ಬಂದು ಗಲಾಟೆ ಮಾಡಿದ್ದಾರೆ. ಮೆಕ್ಕೆಜೋಳ ಮಾರಿದ್ದರ ಬಗ್ಗೆ ನಾವು ಯಾವುದೇ ರಸೀದಿ ಇಟ್ಟುಕೊಂಡಿಲ್ಲ ಏಕೆಂದರೆ ನಂದಿಬೇವುರು ಗ್ರಾಮದವರು ಜಮೀನು ಹತ್ತಿರ ಬಂದು ಮೆಕ್ಕೆಜೋಳ ಖರೀದಿಸಿಕೊಂಡು ಹೋಗಿರುತ್ತೇವೆ. ಮೆಕ್ಕೆ ಜೋಳ ಖರೀದಿಸಿದ ಬಗ್ಗೆ ಕೊಂಡವರು ರಸೀದಿ ಕೊಡುತ್ತಾರೆ ಎಂದರೆ ಅದು ಸರಿ, ಅವುಗಳು ಇವೆಯೇ ಎಂದರೆ ಅವುಗಳನ್ನು ಇಟ್ಟುಕೊಂಡು ನಾವು ಏನು ಮಾಡಲೀ ಇಟ್ಟುಕೊಂಡಿಲ್ಲ ಎನ್ನುತ್ತಾರೆ. ನಾವು ಹರಿಜನ. ದಾವಾ ಜಮೀನಿನ ಮೇಲೆ ಸರ್ಕಾರದಿಂದ ನೀವು ಯಾವುದಾದರು ಸವಲತ್ತು ಪಡೆದು ಕೊಂಡಿದ್ದೀರ ಎಂದರೆ ಅವರು ನಮಗೆ ಪಹಣಿಯನ್ನೇ ಕೊಟ್ಟಿಲ್ಲ ಸವಲತ್ತುಗಳನ್ನು ಹೇಗೆ ಪಡೆದುಕೊಳ್ಳಲಿ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದನ್ನು ತೋರಿಸಲು ನಿ.ಪಿ. 3 ರನ್ನು ಹೊರತುಪಡಿಸಿ ಕಂದಾಯ ಇಲಾಖೆಯ ಯಾವುದೇ ದಾಖಲೆಗಳು ಇಲ್ಲ. ಪ್ರತಿ ಗ್ರಾಮಕ್ಕೂ ಗ್ರಾಮಲೇಕ್ಕಧಿಕಾರಿಗಳು ಬಂದು ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದಾರೆ ಎಂಬುದನ್ನು ಬರೆದುಕೊಂಡು ಹೋಗುತ್ತಾರೆ ಎಂದರೆ ಅದು ನಮಗೆ ಗೊತ್ತಿಲ್ಲ ಅವರು ಬಂದಾಗ ನಾವು ಹೊಲದಲ್ಲಿ

ಇರಬೇಕಲ್ಲ ಎನ್ನುತ್ತಾರೆ. ಕಳೆದ ವರ್ಷ ದಾವಾ ಸ್ವತ್ತಿನಲ್ಲಿ ಕಬ್ಬು ಬೆಳೆಯಲಾಗಿತ್ತು ಎಂದರೆ ಅದು ಸರಿ ಅದನ್ನು ನಾವೇ ಬೆಳೆದಿರುತ್ತೇವೆ ನವೀಲೆ ಪ್ರಶಂತಪ್ಪರಿಂದ ನೀರು ತೆಗೆದುಕೊಂಡು ಕಬ್ಬು ಬೆಳೆದಿರುತ್ತೇವೆ. ಸದರಿ ನವೀಲೆ ಪ್ರಶಂತಪ್ಪ ಅಂದರೆ ಕೊಟ್ರಬಸಪ್ಪನವರ ಮಗ, ಅವರು ಈಗಲು ಜೀವಂತವಾಗಿ ಇದ್ದಾರೆ. ನೀವು ಸ್ವಾದೀನವನ್ನು ಬಿಟ್ಟುಕೊಡಬೇಕು ಅಂತ ನಮಗೆ ಮಾನ್ಯ ನ್ಯಾಯಾಲಯದಿಂದ ಯಾವುದೇ ಆದೇಶ ಬಂದಿಲ್ಲ. ನಮಗೆ ಚೆನ್ನಬಸಪ್ಪನ ಮಕ್ಕಳು ಗೊತ್ತು, ಹಾಲಜ್ಜನ ಮಕ್ಕಳು ಗೊತ್ತಿಲ್ಲ. ಚೆನ್ನಬಸಪ್ಪನ ಮಕ್ಕಳು ನಮಗೆ ಚಿರಪರಿಚಿತರೆನಲ್ಲ. ಅವರು ಅಡವಿಮಲ್ಲಿನಕೇರಿಯವರು. ದಾವಾ ಜಮೀನಿನ ಅಕ್ಕಪಕ್ಕದಲ್ಲಿ ಚೆನ್ನಬಸಪ್ಪನ ಜಮೀನು ಇದೆ ನನಗೆ ಗೊತ್ತಿಲ್ಲ. ಅಡವಿಮಲ್ಲಿನಕೇರಿಯಲ್ಲಿ ಅವರಿಗೆ ಜಮೀನು ಇವೆ ಎಂದರೆ ಇರಬಹುದು ಅವುಗಳನ್ನು ನಾನೇಕೆ ಕೇಳಲಿ ಎನ್ನುತ್ತಾರೆ. ಇವತ್ತಿಗೂ ಚೆನ್ನಬಸಪ್ಪನ ಮಕ್ಕಳನ್ನು ಸಾಹುಕಾರರು ಅನ್ನುತ್ತಾರೆ ಅಂದರೆ ಅವರು ಸಾಹುಕರರು ಅದಕ್ಕೆ ಹಾಗೇ ಅನ್ನುತ್ತಾರೆ. ರವೀಂದ್ರ ಮತ್ತು ಚೆನ್ನಬಪ್ಪನವರ ಮಕ್ಕಳ ಮಾತಕೇಳಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಸ್.ಎಲ್.ಜಿ. ಜೆಡಿಆರ್ 5ರವರ ಪರವಾಗಿ ಪಾಟೀ ಸವಾಲಿಗೆ ಸಮಯವಕಾಶ ಕೇಳಿದರು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನಹಡಗಲಿ.